ಪ್ರಸ್ತಾವವನ್ನು ಅಂಗೀಕರಿಸಲಾಯಿತು

(ಮೊದಲನೆಯ ಖಂಡ ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಪ್ರಸ್ತಾಪ ಅಂಗೀಕಾರ

ಶ್ರೀ ಎಂ.ಸಿ. ನಾಣಯ್ಯ (ಕಾನೂನು ಮತ್ತು ಸಂಸದೀಯ ಸಚಿವರು) (ಶ್ರೀ ಜೆ.ಹೆಚ್. ಪಟೇಲ್ (ಮುಖ್ಯಮಂತ್ರಿಗಳು) ಅವರ ಪರವಾಗಿ) : "ವಿಧಾನ ಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ 1998ನೇ ಸಾಲಿನ ಮೈಸೂರು ಅರಮನೆ (ಅರ್ಜನೆ ಮತ್ತು ವರ್ಗಾವಣೆ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ."

ಅಧ್ಯಕ್ಷರು : ಪ್ರಸ್ತಾವ ಏನೆಂದರೆ "ವಿಧಾನ ಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ 1998ನೇ ಸಾಲಿನ ಮೈಸೂರು ಅರಮನೆ (ಅರ್ಜನೆ ಮತ್ತು ವರ್ಗಾವಣೆ) ವಿಧೇಯಕವನ್ನು ಅಂಗೀಕರಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ವಿಧೇಯಕ 1997

ಅಧ್ಯಕ್ಷರು : ಭೂ ಕಂದಾಯ ಮಸೂದೆ ಮೇಲೆ ಚರ್ಚೆ ಮುಂದುವರೆದಿತ್ತು ಮತ್ತು ಕೆಲವು ಮಾನ್ಯ ಸದಸ್ಯರು ತಮ್ಮ ಅಭಿಪ್ರಾಯಗಳನ್ನು ಸಹ ಕೊಟ್ಟಿದ್ದಾರೆ. ಆದ್ದರಿಂದ, ಮಾನ್ಯ ಕಂದಾಯ ಮಂತ್ರಿಗಳು ಅದಕ್ಕೆ ತಮ್ಮ ಪ್ರತ್ಯುತ್ತರವಾಗಿ ಅಭಿಪ್ರಾಯವನ್ನು ವ್ಯಕ್ತಪಡಿಸಿದರೆ, ನಂತರ ಚರ್ಚೆಗೆ ಅಗತ್ಯ ಇದೆಯೋ ಇಲ್ಲವೋ ಅಥವಾ ಹಾಗೆಯೇ ಮತಕ್ಕೆ ಹಾಕಬೇಕೇ ಎಂಬುದರ ಮೇಲೆ ನಿರ್ಣಯಕ್ಕೆ ಬರುತ್ತೇನೆ.

ಶ್ರೀ ಬಿ. ಸೋಮಶೇಖರ್ (ಕಂದಾಯ ಸಚಿವರು) : ಸನ್ಮಾನ್ಯ ಅಧ್ಯಕ್ಷರೆ, ಸರ್ಕಾರ ಮಂಡಿಸಿರತಕ್ಕಂಥ ವಿಧೇಯಕಕ್ಕೆ ಮತ್ತು ಮಾನ್ಯ ಸದಸ್ಯರು ವ್ಯಕ್ತಪಡಿಸಿರತಕ್ಕಂಥ ಅಭಿಪ್ರಾಯದಲ್ಲಿ ಸ್ವಲ್ಪ ವ್ಯತ್ಯಾಸ ಇದೆ. ಸರ್ಕಾರದ ವತಿಯಿಂದ ತಂದಿರತಕ್ಕಂಥ ಈ ಮಸೂದೆಗೆ ತಿದ್ದುಪಡಿಯನ್ನು ಇಲ್ಲಿ ಮಂಡಿಸುತ್ತಿದ್ದೇನೆ.

AMENDMENT TO CLAUSE 2

SRI B. SOMASHEKAR (Minister for Revenue) : Sir I beg to move: "That in section 94B sought to be inserted by clause 2 of the said Bill.

(1) In sub-section (1).

(I) for the words "he may subject to such rules and to such restrictions and conditions and in such manner as may be prescribed grant the

land to such person" the words figures, letter and brackets he may within one year from the date of commencement of the Karnataka Land Revenue(Amendment) Act, 1997 and subject to such rules, as may be prescribed make recommendations to the Committee or the Additional Committee, as the case may be, constituted under section 94A and such Committee may on receipt of the recommendation grant the Land to such person," shall be substituted.

(II) **for the first provisio, the following shall be substituted, namely:**

"Provided that if an application made under section 94A by any other person for grant of the same land is pending consideration under that section, the committee, or the Additional Committee, as the case may be, shall consider the claim of such other person before granting the land under this sub-section."

(2) **for sub-section (2), the following shall be substituted namely:**

"(2) The provisions of the first proviso, Second proviso, including the table and the explanation in Sub-section (4) and of sub-sections (5) and (6) of section 94A shall apply mutatis mutandis in respect of the grant of land made under sub-section (1)."

THE AMENDMENT WAS PROPOSED

ಶ್ರೀ ಬಿ. ಸೋಮಶೇಖರ್ (ಕಂದಾಯ ಸಚಿವರು) : ಇದರಲ್ಲಿ ಸಂಪೂರ್ಣವಾಗಿ ಸಮಿತಿಗೆ ಅಧಿಕಾರ ಕೊಡತಕ್ಕಂಥದ್ದು ಮೊದಲು ಇರಲಿಲ್ಲ, ಆಗ ಜಿಲ್ಲಾಧಿಕಾರಿಗಳಿಗೆ ಕೊಡಬೇಕೆಂದು ಇತ್ತು. ಈ ಕಮಿಟಿಯನ್ನು ಬೈ-ಪಾಸ್ ಮಾಡಬಾರದು, ಮತ್ತೆ ಕಮಿಟಿ ಇರಬೇಕೆಂದು ಮಾನ್ಯ ಸದಸ್ಯರ ಉದ್ದೇಶವಾಗಿದೆ. ಆದರೆ ಸರ್ಕಾರ ಕಮಿಟಿ ಕೆಲಸವನ್ನು ಸುಲಭ ಮಾಡುವ ದೃಷ್ಟಿಯಿಂದ ಮೊದಲು ಜಿಲ್ಲಾಧಿಕಾರಿಗಳು ಅಥವಾ ಸರ್ಕಾರ ನೇಮಕ ಮಾಡಿರುವ ಅಧಿಕಾರ ಸ್ಥಳ ಪರಿಶೀಲನೆ ಮಾಡಿ ಅಂಥ ಪ್ರಕರಣಗಳನ್ನು ಖುದ್ದಾಗಿ ಕನ್ಸಲ್ಟ್ ಮಾಡಿ ತಮ್ಮ ರೆಕಮೆಂಡೇಷನ್‌ನನ್ನು ಕಮಿಟಿಗೆ ಕೊಡುತ್ತಾರೆ. ನಂತರ ಕಮಿಟಿ ಇದರ ಬಗ್ಗೆ ತೀರ್ಮಾನವನ್ನು ತೆಗೆದುಕೊಳ್ಳುತ್ತದೆ. ಹೀಗಾಗಿ ಕಮಿಟಿಯ ಅಧಿಕಾರವನ್ನು ಯಾವುದೇ ರೀತಿಯಲ್ಲಿ ತೆಗೆದುಹಾಕಿಲ್ಲ, ಅಂತಿಮವಾಗಿ ಕಮಿಟಿಯೇ ತೀರ್ಮಾನ ಮಾಡಬೇಕಾಗುತ್ತದೆ.

ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಕಮಿಟಿ ತಪ್ಪು ಮಾಡಿದರೆ ಎ.ಸಿ.ಗೆ ಮೊದಲು ಅಪೀಲ್ ಹೋಗಬಹುದಿತ್ತು. ಆದರೆ ಈಗ ಡಿ.ಸಿ.ರವರೆ ಶಿಫಾರಸ್ ಮಾಡುವಾಗ ಅಪೀಲ್ ಯಾರ ಹತ್ತಿರ ಹೋಗುವುದು?

ಶ್ರೀ ಬಿ. ಸೋಮಶೇಖರ್ : ಮಾನ್ಯ ಅಧ್ಯಕ್ಷರೇ, ಡಿ.ಸಿ. ಅಂದರೆ, ಸರ್ಕಾರ ಅಲ್ಲಿ ತಹಶೀಲ್ದಾರರನ್ನು ಬೇಕಾದರೆ ನೇಮಕ ಮಾಡಬಹುದು.

ಅಧ್ಯಕ್ಷರು : ಮಾನ್ಯ ಅರಗ ಜ್ಞಾನೇಂದ್ರರವರೇ ಮತ್ತೆ ಇದೇ ವಿಷಯವನ್ನು ಚರ್ಚೆ ಮಾಡುವುದು ಬೇಡ. ನಿಗಧಿತ ಅವಧಿಯೊಳಗೆ ಯಾರು ಅರ್ಜಿಯನ್ನು ಸಲ್ಲಿಸುವುದಕ್ಕೆ ಆಗಿಲ್ಲ ಅಂಥವರಿಗೆ ಮತ್ತೆ ಒಂದು ಅವಕಾಶವನ್ನು ಸರ್ಕಾರ ಕಲ್ಪಿಸಿಕೊಡುತ್ತದೆ ಪುನಃ ತಾರೀಖನ್ನು ವಿಸ್ತರಣೆ ಮಾಡಿದರೆ ಲಕ್ಷಾಂತರ ಅರ್ಜಿಗಳು ಮತ್ತೆ ಬಂದು ಹೊಸ ವಿವಾದಗಳನ್ನು ನಾವೇ ಹುಟ್ಟಿ ಹಾಕಿದಂತೆ ಆಗುತ್ತದೆ. ಡಿ.ಸಿ.ರವರು ಅಥವಾ ಸರ್ಕಾರ ನಿಗಧಿ-ಮಾಡತಕ್ಕಂಥ ಯಾವುದೇ ಒಬ್ಬ ಅಧಿಕಾರಿ ಈ ಅರ್ಜಿಗಳು ಯಾವುದು ಇವೆ, ಅಂದರೆ ನಿಗಧಿತ ಅವಧಿಯಲ್ಲಿ ಕೊಡುವುದಕ್ಕೆ ಆಗದೇ ಇರತಕ್ಕಂಥ ಅರ್ಜಿಗಳ ಸತ್ಯಾಸತ್ಯತೆಯನ್ನು ಅವರು ಪರೀಕ್ಷೆ ಮಾಡಿ ಅದನ್ನು ಕಮಿಟಿಯ ವ್ಯಾಪ್ತಿಗೆ ಕಳುಹಿಸಿಕೊಡುತ್ತಾರೆ. ತಾವು ಶಿವಮೊಗ್ಗದಲ್ಲಿ ಕುಳಿತುಕೊಂಡು ಸ್ಥಳ ಪರಿಶೀಲನೆ ಮಾಡುವುದಕ್ಕೆ ಆಗುತ್ತದೆಯೆ? ಈ ಕೆಲಸವನ್ನು ಅಧಿಕಾರಿಗಳ ಪರವಾಗಿ ಯಾರು ಜವಾಬ್ದಾರಿಯನ್ನು ತೆಗೆದುಕೊಂಡಿರುತ್ತಾರೆ ಅವರು ಸ್ಥಳಕ್ಕೆ ಹೋಗಿ ಅರ್ಜಿದಾರನ ಜಮೀನು ಇದೆಯೇ ಮತ್ತು ಉಳುಮೆ ಮಾಡುತ್ತಿದ್ದಾನೆಯೇ ಅಥವಾ ಅಲ್ಲಿ ಇದ್ದಾನೆಯೇ ಎಂಬುದೆಲ್ಲಾ ಮೇಲ್ನೋಟಕ್ಕೆ ಗೊತ್ತಾಗಬೇಕಲ್ಲಾ. ಸ್ಥಳ ಪರಿಶೀಲನೆ ಎಂದರೆ, ವಿವರವಾದಂಥ ತನಿಖೆಯನ್ನು ನಡೆಸುವುದಿಲ್ಲ.

ಶ್ರೀ ಬಿ. ಸೋಮಶೇಖರ್ : ಮಾನ್ಯ ಅಧ್ಯಕ್ಷರೆ, ಇಲ್ಲಿ ಇನ್ನೊಂದು ಪ್ರಮುಖವಾದಂಥ ವಿಚಾರ ಏನೆಂದರೆ ಸೆಕ್ಷನ್ 94(ಎ) ರಲ್ಲಿ ಕೇವಲ ಗೋಮಾಳ ಲ್ಯಾಂಡ್ ಮತ್ತು ಸರ್ಕಾರದ 'ಬಿ' ಲ್ಯಾಂಡ್ ಮಾತ್ರ ಇತ್ತು. ಇವತ್ತು ಹೊಸದಾಗಿ ಸೆಕ್ಷನ್ 94(ಬಿ) ಯನ್ನು ಇಂಟ್ರಡ್ಯೂಸ್ ಮಾಡಿ ಕೆಲವು ವಿಶೇಷವಾದಂತಹ ಪ್ರಿವಿಲೇಜ್ ಲ್ಯಾಂಡ್ ಎಂದು ಏನಿದೆ, ಉದಾಹರಣೆಗೆ ಮಂಗಳೂರಿನಲ್ಲಿ ಕುಮ್ಕಿ ಜಮೀನು ಇರಬಹುದು ಅಥವಾ ಸೊಪ್ಪಿನ ಬೆಟ್ಟ ಇರಬಹುದು, ಕೂರ್ಗಿನಲ್ಲಿ ಕೆಲವು ವಿಶೇಷವಾದಂತಹ ಭೂಮಿ ಇರಬಹುದು ಮತ್ತು ಅಗ್ರಿಕಲ್ಚರಲ್ ಲೇಬರ್ಸ್, ಸಣ್ಣ ಮತ್ತು ಮಧ್ಯಮ ರೈತರು ಒಂದು ಅಥವಾ ಎರಡು ಎಕರೆಯಲ್ಲಿ ಕಾಫಿ ತೋಟವನ್ನು ಮಾಡಿರಬಹುದು ಅಥವಾ ಅಡಿಕೆ ತೋಟವನ್ನು ಮಾಡಿರಬಹುದು, ಇಂಥವರಿಗೆ ಸಹಾಯ ಮಾಡಬೇಕೆಂಬ ದೃಷ್ಟಿಯಿಂದ ಸರ್ಕಾರ ಬಹಳ ಪ್ರಮುಖ್ಯವಾದಂಥ ತೀರ್ಮಾನವನ್ನು ತೆಗೆದುಕೊಂಡಿದ್ದೇವೆ. ಇಂಥ ವಿಚಾರದಲ್ಲಿ ನಮ್ಮ ಕಂದಾಯ ಅಧಿಕಾರಿಗಳು ಸ್ಥಳ ಪರಿಶೀಲನೆ ಮಾಡಿ ಯಾರು ಅರ್ಹರಿದ್ದಾರೆ ಅಂಥವರನ್ನು ಕಮಿಟಿಗೆ ಶಿಫಾರಸು ಮಾಡುತ್ತಾರೆ. ಇದಕ್ಕೆ ಕಮಿಟಿಯವರೇ ಅಂತಿಮವಾಗಿ ತೀರ್ಮಾನವನ್ನು ತೆಗೆದುಕೊಳ್ಳುತ್ತಾರೆ. ಆದ್ದರಿಂದ ಇದು ಬಹಳ ಪ್ರಾಮುಖ್ಯವಾದುದೆಂದು ನಾವು ತಿಳಿದುಕೊಂಡಿದ್ದೇವೆ.

ಶ್ರೀ ಯು.ಆರ್. ಸಭಾಪತಿ : ಮಾನ್ಯ ಅಧ್ಯಕ್ಷರೆ, ಹೆಚ್ಚುವರಿ ಸಮಿತಿ ಎಂದು ಏನು ಇದೆ, ಅದಕ್ಕೆ ಉಪ ವಿಭಾಗ ಅಧಿಕಾರಿಗಳ ಅಧ್ಯಕ್ಷತೆ ಬದಲಾಗಿ.....

ಅಧ್ಯಕ್ಷರು : ಅದು ಬೇರೆ ವಿಚಾರ ಆಯಿತು. ಮಾನ್ಯ ಪ್ರತಾಪ್‌ಚಂದ್ರ ಶೆಟ್ಟಿಯವರು ನನಗೆ ಭೇಟಿಯಾಗಿ ಈ ವಿಷಯವನ್ನು ಹೇಳಿದ್ದಾರೆ. ಇವತ್ತು ನಮ್ಮ ಮುಂದೆ ಇರತಕ್ಕಂಥ ತಿದ್ದುಪಡಿ

ಸೆಕ್ಷನ್ 94(ಎ)ಗೆ ಸೀಮಿತವಾಗಿರತಕ್ಕಂಥದು. ಮೊನ್ನೆದಿವಸ ಹಿರಿಯ ಸದಸ್ಯರಾದ ಮಾನ್ಯ ಕಾಗೋಡು ತಿಮ್ಮಪ್ಪನವರು ಮತ್ತು ಅನೇಕ ಸದಸ್ಯರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಸರ್ಕಾರದವರು ಇದಕ್ಕೆ ಅನುಗುಣವಾಗಿ ಈ ತಿದ್ದುಪಡಿಯನ್ನು ತಂದಿದ್ದಾರೆ, ಬಹುಶಃ ಇದಕ್ಕೆ ಯಾರೂ ವಿರೋಧ ಮಾಡುವುದಿಲ್ಲವೆಂದು ನನ್ನ ಅಭಿಪ್ರಾಯ.

ಶ್ರೀ ಅರಗ ಜ್ಞಾನೇಂದ್ರ : ಮಾನ್ಯ ಅಧ್ಯಕ್ಷರೆ, ನಮ್ಮ ಮಲೆನಾಡಿನಲ್ಲಿ ಹಿಂದೆ ಎರಡು ಹೆಕ್ಟೇರ್‌ಗೆ 'ಬಿ' ಕ್ಲಾಸ್ ಲ್ಯಾಂಡ್‌ವರೆಗೆ ಎಂದು ಪರಿಮಿತಿ ಹಾಕಿದ್ದರು, ಆದರೆ ನಮ್ಮ ತಾಲ್ಲೂಕಿನಲ್ಲಿ 'ಬಿ' ಕ್ಲಾಸ್ ಲ್ಯಾಂಡ್ ಇಲ್ಲ, ಈಗ ಇರುವ ಲ್ಯಾಂಡ್ ಎಲ್ಲಾ "ಸಿ" ಕ್ಲಾಸ್. ಆದ್ದರಿಂದ ಎರಡು ಹೆಕ್ಟೇರ್ 'ಸಿ' ಕ್ಲಾಸ್ ಲ್ಯಾಂಡ್ ಎಂದು ದಯಮಾಡಿ ತಾವು ತಂದರೆ ಎಲ್ಲರಿಗೂ ಉಪಕಾರ ಮಾಡಿದಂತೆ ಆಗುತ್ತದೆ, ಇಲ್ಲದಿದ್ದರೆ ಯಾರಿಗೂ ಉಪಯೋಗ ಆಗುವುದಿಲ್ಲ.

ಶ್ರೀ ಬಿ. ಸೋಮಶೇಖರ್ : ಪರಿಶೀಲನೆ ಮಾಡುತ್ತೇನೆ.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ) : ಫಾರಂ ನಂಬರ್ 50ನ್ನು ಹಾಕತಕ್ಕಂಥ ಸಂದರ್ಭದಲ್ಲಿ ಸರ್ಕಾರಿ ಜಮೀನು ಮತ್ತು ನೀವು ಹೇಳಿರತಕ್ಕಂಥ ಕುಮ್ಕಿ ಜಮೀನು ಇದಕ್ಕೆ ಅರ್ಜಿಯನ್ನು ಹಾಕಿಕೊಂಡಿದ್ದಾರೆ. ನಮ್ಮಲ್ಲಿ ಬಹುಶಃ ಕಾಲುಭಾಗ ಕಡಿಮೆ ಎಂದರೆ ಮೂರು ನಾಲ್ಕು ಸಾವಿರ ಈ ಕುಮ್ಕಿ ಜಮೀನಿಗೆ ಕೊಟ್ಟಿರುವ ಅರ್ಜಿಗಳನ್ನು ಈ ಹಂತದಲ್ಲಿ ತಡೆಹಿಡಿಯಲ್ಪಟ್ಟಿದ್ದಾರೆ, ಆದರೆ ರಿಜೆಕ್ಟ್ ಮಾಡಿಲ್ಲ, ಮಾಡಿದರೆ ಅವರಿಗೆ ಬೇಸರವಾಗುತ್ತದೆ. ಎಂದು ಅದೇ ಹಂತದಲ್ಲಿ ಇವೆ. ಅವರಿಗೆ ಇದರ ಬಗ್ಗೆ ವಿಶೇಷವಾದ ನಿರ್ದೇಶನ ಕೊಟ್ಟು ತನಿಖೆ ಮಾಡಿ, ಅವುಗಳನ್ನು ಇದರಲ್ಲಿ ತಕ್ಷಣ ತೆಗೆದುಕೊಂಡರೆ ಆಗಬಹುದು ಮತ್ತು ಅವರಿಗೆ ಅರ್ಜಿ ಹಾಕುವ ಅವಕಾಶ ಮಾಡಿಕೊಡಬೇಕು.

ಶ್ರೀ ಬಿ. ಸೋಮಶೇಖರ್ : ದಿನಾಂಕ 19-9-1991ರೊಳಗೆ ಯಾರು ಅರ್ಜಿ ಹಾಕುವುದಕ್ಕೆ ಆಗಿಲ್ಲ, ಅವರ ಅರ್ಜಿ ರಿಜೆಕ್ಟ್ ಆಗಿರಬಹುದು ಒಟ್ಟಿನಲ್ಲಿ ಯಾರು ಸ್ವಾಧೀನದಲ್ಲಿದ್ದಾರೆ ಅಂತವರ ಸ್ಥಳ ಪರಿಶೀಲನೆ ಮಾಡುವ ವಿಚಾರ ಇದರಲ್ಲಿ ಇರುವುದರಿಂದ ಅಂತಹವರೆಲ್ಲಾ ಇದರಲ್ಲಿ ಕವರ್ ಆಗುತ್ತಾರೆ.

ಶ್ರೀ ಹೆಚ್. ಎಸ್. ಪ್ರಕಾಶ್ (ಹಾಸನ್) : ಹಿಂದೆ ಸರ್ಕಾರ ಗ್ರೋಮೋರ್ ಫುಡ್‌ನಲ್ಲಿ ಹಂಗಾಮಿ ಸಾಗುವಳಿಯನ್ನು ರೈತರಿಗೆ ಕೊಟ್ಟಿತ್ತು. ಅದು ಅನೇಕ ಜನರಿಗೆ ಹಿಂದೆ ಅರ್ಜಿ ಹಾಕಲು ಅವಕಾಶ ಕೊಟ್ಟಿದ್ದರೂ ಸಹ ಶಾಶ್ವತವಾಗಿ ಸಾಗುವಳಿ ಮಾಡುವುದಕ್ಕೆ ಆಗಲಿಲ್ಲ. ಹಂಗಾಮಿ ಸಾಗುವಳಿ ಹಿಂದೆ ಸರ್ಕಾರಿ ಜಮೀನಿಗೆ ಅವರು ಹಾಕಿಕೊಂಡು ಶಾಶ್ವತವಾಗಿ ಸಾಗುವಳಿ ಕೊಡತಕ್ಕಂಥ ಅವಕಾಶ ಇದರಲ್ಲಿ ಇದೆಯೇ ಎನ್ನತಕ್ಕಂಥದ್ದು ನನ್ನ ಪ್ರಶ್ನೆ. ಜೊತೆಗೆ ಇದನ್ನು ಶಾಸಕರ ಕಮಿಟಿಗೆ ಏಕೆ ಕೊಡಬಾರದು. ಜಿಲ್ಲಾಧಿಕಾರಿಗಳು ಮತ್ತು ಉಪವಿಭಾಗಾಧಿಕಾರಿಗಳು ಇದನ್ನು ತನಿಖೆ ಮಾಡುವುದರ ಬದಲು ದರಖಾಸ್ತು ಕಮಿಟಿಗೆ ಅವಕಾಶ ಮಾಡಿಕೊಟ್ಟರೆ ಶಾಸಕರಿಗೆ ಮಾಡಲಿಕ್ಕೆ ಅನುಕೂಲವಾಗುತ್ತದೆಂದು ನನ್ನ ಮನವಿ ಇದೆ.

ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ) : ಅಧ್ಯಕ್ಷರೆ, ಇಲ್ಲಿ ಶಲ್ ಕನ್ಸಿಡರ್ ಎನ್ನುವ ಪದವನ್ನು ಬಳಸಿರುವುದು ಇದು ಸರಿಯೇ? ಅದನ್ನು ಬಳಸಿದರೆ ಇದು ಮಾಂಡೇಟರಿ ಆಗುತ್ತದೆ. ಜಿಲ್ಲಾಧಿಕಾರಿಗಳು ಕಮಿಟಿಗೆ ಬರೆದು ಕಳುಹಿಸಿದರೆ ಕಮಿಟಿಗೆ ಆಫ್‌ಷನ್ನೇ ಉಳಿಯುವುದಿಲ್ಲ. ಮೇ ಅಲ್ಲೋ ಕನ್ಸಿಡರ್ ಎನ್ನುವ ಪದವನ್ನು ಇಲ್ಲಿ ಸಬ್‌ಸ್ಟೂಟ್ ಮಾಡಬೇಕು.

SRI B. SOMASHEKAR (Minister for Revenue) : He may i.e. the Deputy Commissioner or any officer authorised by the government within one year from the date of commencement of the Karnataka Land Revenue (Amendment) Act, 1997 and subject to such rules as may be prescribed make recommendations to the Committee or the Additional Committee, as the case may be, constituted under section, 94A and such Committee may, on receipt of the recommendation, great the land to such person, This is the provision.

SRI J.C. MADHUSWAMY : Kindly see sub-clause- II. It is said:

"Provided that if an aplication is made under section 94A by any other person for grant of the same land is pending consideration under that section the committee, or the Additional Committee, as the case may be, shall consider the claim of such other person before granting the land under this sub-section."

ಅಲ್ಲಿ "ಮೇ" ಎನ್ನುವ ಪದವನ್ನು ಬಳಸಿದರೆ ಕಮಿಟಿ ಮಾಡಬಹುದು ಅಥವಾ ಬಿಡಬಹುದು "Shall consider " means the DC's recomendatiom is binding on the Committee. ಇದು ಕೆಳಗಡೆ ಬಂದಾಗ ಡಿ.ಸಿ.ಯವರು ರೆಕಮೆಂಡ್ ಮಾಡಿದಾಗ ಕಮಿಟಿಗೆ ಏನು ಪವರ್ ಉಳಿಯುತ್ತದೆ.

ಶ್ರೀ ಬಿ. ಸೋಮಶೇಖರ್ : ಇವತ್ತು ಜಿಲ್ಲಾಧಿಕಾರಿಗಳು ರೆಕಮೆಂಡ್ ಮಾಡಿದ್ದನ್ನು ಕಮಿಟಿಯವರು ಮಾಡುತ್ತಾರೆ.

SRI J.C. MADHUSWAMY : No. This sends a wrong signal.

SRI B. SOMASHEKAR : I will make it clear. The powers of the committee has not been taken over. The Deputy Commissioner or any officer will conduct the enquiry and make recommendations and place before the committee. Ultimately, the Committee will decide.

ಶ್ರೀ ಜೆ.ಸಿ. ಮಾಧುಸ್ವಾಮಿ : ಹಿಂದೆ ಒಂದು ಸಲ ಏನಾಗುತ್ತೆಂದರೆ: ಯಾವುದಾದರೂ ಅರ್ಜಿ ಅಥವಾ ಜಿಲ್ಲಾಧಿಕಾರಿಗಳ ಗಮನಕ್ಕೆ ಸುವೋಮೋಟೋ ಬಂದಂಥ ಕೇಸ್‌ನಲ್ಲಿ ನಮ್ಮ ಕಮಿಟಿ ಮುಂದೆ ಇರುವ ಪೆಂಡಿಂಗ್ ಇರುವ ಅರ್ಜಿಗಳನ್ನೂ ಜಿಲ್ಲಾಧಿಕಾರಿಗಳು ಕನ್ಸಿಡರ್ ಮಾಡಬೇಕೆಂದು ಇದೆ. ಅದನ್ನು ಅಮೆಂಡ್ ಮಾಡಿ ಅಂತಹ ಅರ್ಜಿಗಳು ಜಿಲ್ಲಾಧಿಕಾರಿಯಿಂದ ಕಮಿಟಿಗೆ ರೆಫರ್ ಆದರೆ Committee shall consider ಎಂದು ಹೇಳುತ್ತಾರೆ. That will send a wrong singal and there will be applications pending.

MR. SPEAKER : No. Please understand. The very applicant is one who did not avail the earlier opportunity given by the government. ನಿಗದಿತವಾದ ದಿನಾಂಕದಲ್ಲಿ ಯಾರು ಅರ್ಜಿ ಕೊಡುವುದಕ್ಕಾಗಲಿಲ್ಲ, ಅದು ಜಿಲ್ಲಾಧಿಕಾರಿಗಳ ಮುಂದೆ ಹೋಗುತ್ತದೆ. ಜಿಲ್ಲಾಧಿಕಾರಗಳು ಪ್ರಿಲಿಮಿನರಿಯಾಗಿ ಎನ್‌ಕ್ವೈರಿ ಮಾಡಿ ಅವರು ಸಮಾಧಾನವಾದ ಮೇಲೆ ಅವನು ನತದೃಷ್ಟ ಅರ್ಜಿ ಕೊಟ್ಟಿಲ್ಲ ಎಂದು ಹೇಳಿ ಅದನ್ನು ಕಮಿಟಿ ಮುಂದೆ ಕಳುಹಿಸುತ್ತಾರೆ. The Committee has an obligation. The Committee shall consider that application on the recommendation of the Deputy Commissioner. ಕನ್ಸಿಡರ್ ಅಂದರೆ ಮಾಡಬಹುದು ಅಥವಾ ಬಿಡಬಹುದು, ಅದು ಬೇರೆ ವಿಷಯ, ಅದನ್ನು ಕನ್ಸಿಡರ್ ಮಾಡಬೇಕಾಗುತ್ತದೆ. They cannot ignore. Otherwise, what is the use of extending this benefit?

SRI. J.C. MADHUSWAMY : If there are applications already pending?

ಶ್ರೀ ಕಾಗೋಡು ತಿಮ್ಮಪ್ಪ : ಒಂದು ಚರ್ಚೆ ಬಂತು. ಹೊಸದಾಗಿ ಅರ್ಜಿ ಕೊಡುತ್ತಾರೆ, ಆ ಜಮೀನಿಗೆ ಬೇರೆಯವರು ಹಿಂದೆ ಅರ್ಜಿಯನ್ನು ಕೊಟ್ಟಿದ್ದರೆ ಆ ಅರ್ಜಿಯನ್ನೂ ಜೊತೆಗೆ ಇದನ್ನು ತೆಗೆದುಕೊಂಡು ಮಾಡಬೇಕೆಂಬ ಬಗ್ಗೆ ಚರ್ಚೆಗೆ ಬಂತು, ಅದಕ್ಕಾಗಿ ಈ ಪ್ರಾವಿಷನ್ ತಂದಿದ್ದು.

SRI J.C. MADHUSWAMY : Alongwith those applications ಬಂದರೆ ಪರವಾಗಿಲ್ಲ. ಇದನ್ನೇ ಕನ್ಸಿಡರ್ ಮಾಡಿಬೇಕೆನ್ನುವ ಭಾವನೆ ಬರಬಾರದು.

ಅಧ್ಯಕ್ಷರು: ಅವರು ಎಲ್ಲಾ ಹೇಳಿದ್ದಾರೆ, ಕನ್ಸಿಡರ್ ಮಾಡುತ್ತೇವೆಂದು ಹೇಳಿದ್ದಾರೆ.

SRI J.C. MADHUSWAMY : This will send wrong signals. ತಾವು ಮಂತ್ರಿಗಳಿಗೆ ಕ್ಲಾರಿಫೈ ಮಾಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಕೋಲಾರದಲ್ಲಿ ಲೇಡಿ ಜಿಲ್ಲಾಧಿಕಾರಿಗಳು ಇದ್ದಾರೆಯೇ? ಏಕೆಂದರೆ ತಾವು ಷಿಷಲ್ ಕನ್ಸೀಡರ್ ಎಂದು ಹೇಳಿದಿರಿ.

ಶ್ರೀ ಬಿ. ಸೋಮಶೇಖರ : ಒಂದು ವೇಳೆ ಕಮಿಟಿ ಮುಂದೆ ಬೇರೆ ಅರ್ಜಿಗಳು ಇದ್ದರೆ ... ಕನ್ಸಿಡರ್ ಮಾಡಬೇಕೆಂದು ಇದೆ. ಕನಿಡರ್ ಮಾಡಿ ಎಕೆಪ್ಟ್ ಮಾಡಬಹುದು,

ಅಥವಾ ರಿಜೆಕ್ಟ್ ಮಾಡಬಹುದು. ಒಟ್ಟಿನಲ್ಲಿ ಇವರ ರೆಕಮೆಂಡೇಷನ್ ಆ ಕಮಿಟಿಯ ಮುಂದೆ ಬರುತ್ತದೆ.

ಶ್ರೀ ಜಗದೀಶ್ ಶೆಟ್ಟರ್ : ಲಾಂಡ್ ರೆವಿನ್ಯೂ ಆಕ್ಟ್‌ನಲ್ಲಿ ಮೊದಲಿನಿಂದ ಪ್ರಾವಿಷನ್ ಇದೆ. ಸಿಟಿ ಲಿಮಿಟ್ 5 ಕಿ.ಮೀ., 8 ಕಿ.ಮೀ. ಬೇರೆ ನಗರ ಪ್ರದೇಶಗಳಲ್ಲಿ ಇವೆ. ಆ ಲಿಮಿಟ್ ಒಳಗಡೆ ಬರತಕ್ಕ ಲ್ಯಾಂಡ್ಸ್ ಬಗ್ಗೆ ಬಗರ್ ಹುಕುಂ ಇದು ಅಪ್ಲೈ ಆಗುವುದಿಲ್ಲವೆಂದು ಮೊದಲಿನಿಂದ ಇದೆ.

ಶ್ರೀ ಬಿ. ಸೋಮಶೇಖರ್ : ನಾವು ಅದನ್ನು ಸ್ಪೆಸಿಫಿಕ್ ಆಗಿ ತಂದಿದ್ದೇವೆ. ಅರ್ಬನ್ ಡೆವಲಪ್‌ಮೆಂಟ್ ಏರಿಯಾದಲ್ಲಿ ಯಾರು ಬರುತ್ತಾರೆ, ಅದನ್ನೂ ತರಬೇಕೆಂದು ಸ್ಪೆಷಿಫಿಕ್ ಆಗಿ ಮಾಡಿದ್ದೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅದನ್ನು ತರಬೇಕೆಂದು ಅಲ್ಲ, ಅದನ್ನು ರೀಟೈನ್ ಮಾಡಬೇಕು as it is.

ಶ್ರೀ ಜಗದೀಶ್ ಶೆಟ್ಟರ್ : ಮೊದಲಿನಿಂದ ಆಕ್ಟ್‌ನಲ್ಲಿ ಇದು ಇದೆ. ಆದರೆ ಸಿಟಿ ಬೆಳೆದುಕೊಂಡ ಹೋಗಿದೆ. 5, 10, 15 ಕಿಮೀ. ಸಿಟಿ ಬೆಳದಿದೆ. ಅದರ ಬಗ್ಗೆ, ಏನಾದರೂ ತಾವು ವಿಚಾರ ಮಾಡಬೇಕಾಗುತ್ತದೆ. ಅದನ್ನು ಸೇರಿಸಿ ನೋಟಿಫೈಡ್ ಏರಿಯಾ ಎಲ್ಲಿಯವರೆಗೆ ಇದೆ ನೋಡಿ. ಅದಕ್ಕೆ ಸಂಬಂಧಪಟ್ಟಂತೆ ಕೋಟಿಗಟ್ಟಲೆ ಅರ್ಜಿ ಇರುತ್ತವೆ.

ಅಧ್ಯಕ್ಷರು : ಸರ್ಕಾರಕ್ಕೆ ಈ ವಿಷಯದಲ್ಲಿ ಗಮನಿಸುವುದಕ್ಕೆ ಸೂಚನೆ ಕೊಡೋಣ. ಜಮೀನು ಅಂದರೆ ಯಾರಾದರೂ ಕಬಳಿಸುವುದಕ್ಕೆ ನೋಡುತ್ತಾರೆ.

ಶ್ರೀ ಬಿ.ಬಿ. ಶಿವಪ್ಪ (ಸಕಲೇಶಪುರ) : ಅಧ್ಯಕ್ಷರೆ, ಬಗರ್ ಹುಕುಂ ಸಾಗುವಳಿ ಕಮಿಟಿ ನಡೆಸತಕ್ಕಂಥ ಸಭೆಗಳಲ್ಲಿ ಸಮಯಕ್ಕೆ ಸರಿಯಾಗಿ ಯಾರು ಅರ್ಜಿಗಳನ್ನು ಕೊಡಲಿಲ್ಲ, ಮತು ಫಾರಂ ಹಾಕಿಕೊಂಡಿಲ್ಲ ಅಂತಹವರ ಅರ್ಜಿಗಳನ್ನು ನಾವು ವಜಾ ಮಾಡಿದ್ದೇವೆ ಅದಕ್ಕೆ ತಾವು ಕಾನೂನು ತರತಕ್ಕಂಥದ್ದು ಹೇಳುತ್ತಿದ್ದೀರಿ. ಇಂತಹ ಬೆಳೆಗಳನ್ನು ಬೆಳೆಯಬೇಕೆಂದು ನಿಗದಿಪಡಿಸಿರುವುದರಿಂದ ನಾನು ಅರ್ಜಿಗಳನ್ನು ವಜಾ ಮಾಡಿದ್ದೇವೆ. ನಾನು ಒಂದು ಪ್ರಶ್ನೆ ಕೇಳಿದೆ ಅದಕ್ಕೆ ಇಲಾಖೆಯಿಂದ ಉತ್ತರ ಬಂದಿದೆ. ಇಂತಹ ಬೆಳೆಯನ್ನು ಬೆಳೆಯಬೇಕೆಂದು ಕಂಡೀಷನ್ ಇಲ್ಲವೆಂದು ಉತ್ತರವನ್ನು ಕೊಟ್ಟಿದ್ದಾರೆ. ನಮಗೆ ಬಂದಿರುವ ಗೈಡಲೈನ್ಸ್‌ದಲ್ಲಿ ಕಾಫಿ ಬೆಳೆಯುವವರಿಗೆ ಮಂಜೂರು ಮಾಡಲು ಆಗುವುದಿಲ್ಲ, ಮನೆ ಕಟ್ಟಿದರೆ ಅದು ಮಂಜೂರು ಆಗುವುದಿಲ್ಲ. ಇವತ್ತು ಮಂಜೂರು ಮಾಡುವ ಸಂದರ್ಭದಲ್ಲಿ ಮನೆ ಕಟ್ಟಿದರೆ, ಅದಕ್ಕೆ ಒಂದು ಗುಂಟೆ ಜಮೀನು ಕಳೆದು ಬಾಕಿ ಉಳಿದ ಜಮೀನನ್ನು ಮಂಜೂರು ಮಾಡುತ್ತೇವೆ. ಅವನು ಆ ಜಾಗವನ್ನು ಬಿಡುವುದಿಲ್ಲ. ಇವತ್ತು ನಾವು ಕಮಿಟಿಯಲ್ಲಿ ಮಾಡಿರತಕ್ಕಂಥದ್ದು ಹಾಗೆ ಸಾಕಷ್ಟು ಅರ್ಜಿಗಳನ್ನು ವಜಾ ಮಾಡಿದ್ದೇವೆ. ತಾವು ಹೇಳಿದಿರಿ ಕಾಫಿ ಬೆಳೆಯುವವರಿಗೂ ಅನುಕೂಲವಾಗುವ ರೀತಿಯಲ್ಲಿ ಬರುವುದಾದರೆ ಇವತ್ತು ನಾವು ವಜಾ ಮಾಡಿರುವ ಅರ್ಜಿಗಳು ಇವೆ, ಅದಕ್ಕೆ ಅವರೂ ಕೂಡ ಮರಳಿ ಅರ್ಜಿ ಹಾಕುವುದಕ್ಕೆ ಅವಕಾಶ ಇದೆಯೇ?

SRI KAGODU THIMMAPPA : In that the word used is "unauthorised occupation"

MR. SPEAKER : These Committees were constituted by the government in the best of their wisdom to help only those who are continuous physical possession, unauthoriesd, occupation of government land and who did not have lands of their own. This is not applicable to those who had lands and also who had encroached upon the abutting land which belongs to government. Let that clarification be very clear. This is exclusively meant to protect the interests of the weaker section.

ಶ್ರೀ ಬಿ.ಬಿ. ಶಿವಪ್ಪ : ಅಧ್ಯಕ್ಷರೆ, ತಾವು ಅಷ್ಟು ಅರ್ಥವನ್ನು ಮಾಡಿಕೊಂಡಿದ್ದೀರಿ. ಇದಕ್ಕೆ ಎಕರೆ ಲಿಮಿಟ್ ಮಾಡಿದ್ದಾರೆ. 5 ಎಕರೆಗಿಂತ ಹೆಚ್ಚಿಗೆ ಇರುವಂತೆ ಇಲ್ಲ. ಅವನು ಬಡವ, ಅವನ ಸ್ವಂತ ಜಮೀನು ಏನು ಇತ್ತು, ಒತ್ತುವರಿ ಮಾಡಿಕೊಂಡಿದ್ದು ಸೇರಿ 4 ಎಕರೆ 38 ಗುಂಟೆ ಮಾತ್ರ ಮಂಜೂರು ಮಾಡಲು ಅವಕಾಶ ಇತ್ತು. ಅದರ ಮೇಲೆ ಬಂದರೆ ಮಂಜೂರು ಮಾಡುವ ಅವಕಾಶ ಇಲ್ಲ. 4 ಎಕರೆ 38 ಗುಂಟೆ ಲಿಮಿಟ್ ನಾವು ಮಾಡಿದ ಮೇಲೆ ಇಂತಹ ಬೆಳೆಯನ್ನು ಬೆಳೆಯಬೇಕೆಂದು ಲಿಮಿಟ್ ಮಾಡಿದರೆ ಅದು ಆಗುವುದಿಲ್ಲ. ಅವನು ಯಾವುದಾದರೂ ಬೆಳೆಯನ್ನು ಬೆಳೆಯಲಿ, ಈ ರೀತಿಯಾಗಿ ನಾವು ಅರ್ಜಿ ವಜಾ ಮಾಡಿದ್ದೇವೆ. ಅಧ್ಯಕ್ಷರು, ಅದಕ್ಕೆ ಬೇರೆ ರೀತಿ ವ್ಯವಸ್ಥೆ ಮಾಡಬೇಕು. 4 ಎಕರೆ 38 ಗುಂಟೆ ಮಾತ್ರ ಮಂಜೂರು ಮಾಡುವುದಕ್ಕೆ ಅವಕಾಶ ಇದೆ. ಇಂತಹ ಬೆಳೆಗಳನ್ನು ಬೆಳೆಯಬೇಕೆಂದು ಅದರಲ್ಲಿ ಇದೆ.

ಶ್ರೀ ಬಿ. ಸೋಮಶೇಖರ್ (ಕಂದಾಯ ಸಚಿವರು) : ಮಾನ್ಯ ಅಧ್ಯಕ್ಷರೆ, ತಾವು ಚೆನ್ನಾಗಿ ವಿವರಣೆಯನ್ನು ಕೊಟ್ಟಿದ್ದೀರಿ. ಯಾವ ಒಬ್ಬ ವ್ಯಕ್ತಿ ದಿ.19.1.91ರೊಳಗಾಗಿ ಫಿಸಿಕಲ್ ಪೋಸಿಷನ್‌ನಲ್ಲಿ ಅರ್ಜಿಯನ್ನು ಹಾಕಿಕೊಳ್ಳಲಿಕ್ಕೆ ಆಗಲಿಲ್ಲವಾದಂಥವರ ಬಗ್ಗೆ ನಾವು ಒಂದು ಕಾನೂನನ್ನು ತರುತ್ತಾ ಇದ್ದೇವೆ. ಒಂದು ವೇಳೆ ಆ ವ್ಯಕ್ತಿ ಕಾಫಿನೇ ಬೆಳೆಯುತ್ತಾ ಇರಲಿ, ಏಲಕ್ಕಿನೇ ಬೆಳೆಯುತ್ತಾ ಇರಲಿ ಎರಡು ಹೆಕ್ಟೇರ್ ಒಳಗಡೆ ಇರುವಂಥವರಿಗೆ ಅವಕಾಶವಿದೆ. ಅರವನ್ನು ನಾವು ಕವರ್ ಮಾಡುತ್ತಾ ಇದ್ದೇವೆ. ಆ ವ್ಯಕ್ತಿಗೆ ಅರ್ಜಿ ಹಾಕದಿದ್ದರೂ ಅವನೇನಾದರೂ ಪ್ಲಾಂಟೇಷನ್ ಕ್ರಾಪ್ಸ್ ಇದ್ದರೆ ಅಂಥವರಿಗೂ ಇದರಲ್ಲಿ ಸಹಾಯವಾಗುತ್ತದೆ.

ಶ್ರೀ ಬಿ.ಬಿ. ಶಿವಪ್ಪ : ವಜಾ ಮಾಡಿಬಿಟ್ಟಿರುವ ಬಗ್ಗೆ ನಾನು ಕೇಳಿದ್ದು ಕಾನೂನಿಗೆ ಒಳ್ಳೆಯ ಉದ್ದೇಶದಿಂದ ತಾವು ತಿದ್ದುಪಡಿ ಮಾಡುತ್ತಿದ್ದೀರಿ.

ಶ್ರೀ ಕಾಗೋಡು ತಿಮ್ಮಪ್ಪ : ಕಂದಾಯ ಇಲಾಖೆಯ ಕೆಲವು ಅಧಿಕಾರಿಗಳು ಏನು ಮಾಡಿದ್ದಾರೆಂದರೆ ಅವರು ಹೇಳಿದ ರೀತಿಯಲ್ಲಿ ಒಂದು ಸುತ್ತೋಲೆಯನ್ನು ಹೊರಡಿಸಿದ್ದಾರೆ. It is against the Rules, it is against the Act. They have no business to interpret

the rules. The Rules and the Circular should be consistent with the Act. We have ignored that. That is the mistake. ಅವರು ಹೇಳಿದರಲ್ಲಿ ಸ್ವಲ್ಪ ಅರ್ಥವಿದೆ.

ಶ್ರೀ ಬಿ. ಸೋಮಶೇಖರ್ (ಕಂದಾಯ ಸಚಿವರು) : ಆ ರೀತಿ ಏನಾದರೂ ಇದ್ದರೆ ನಾನು ಪರಿಶೀಲನೆ ಮಾಡಿ, ಏನು ಸೂಕ್ತವಾದ ನಿರ್ದೇಶನವನ್ನು ಕೊಡಬಹುದೋ ಅದನ್ನು ಕೊಡುತ್ತೇನೆ.

ಅಧ್ಯಕ್ಷರು : ಮಾನ್ಯ ಶಿವಪ್ಪನವರು ಪ್ರಸ್ತಾಪ ಮಾಡಿದ ವಿಚಾರವಿಷ್ಟೆ. ನೀವು ಹೇಳಿದಂತೆ ಅನಧಿಕೃತವಾಗಿ ಸ್ವಾಧೀನದಲ್ಲಿಟ್ಟುಕೊಂಡು ಬಹಳ ಕಡಿಮೆ ಎಕ್ಕೆಸ್ ಲ್ಯಾಂಡ್‌ನಲ್ಲಿ ಇರತಕ್ಕಂಥವರು ಆ ಪ್ರದೇಶದ ಹವಾಮಾನಕ್ಕೆ ಅನುಗುಣವಾಗಿ ಕಾಫಿನೋ, ಏಲಕ್ಕಿನೋ ಬೆಳೆದಿದ್ದಾರೆ. ಮೊದಲು ಇಂಥ ಬೆಳಗಳನ್ನು ಬೆಳೆದಿದ್ದರೆ ಆ ಜಮೀನನ್ನು ಪರಿಗಣಿಸಬಾರದು ಎಂದು ಅವರ ಅರ್ಜಿಯನ್ನು ವಜಾ ಮಾಡಿಬಿಟ್ಟಿದ್ದೀರಿ. ಆದರೆ ಅವರೆಲ್ಲರೂ ಕೂಡ ಹಿಂದುಳಿದ ವರ್ಗಕ್ಕೆ ಬರುತ್ತಾರೆ. ಕಡಿಮೆ ಜಮೀನು ಇರತಕ್ಕಂಥವರು ಈ ಬೆಳೆಯನ್ನು ಬೆಳೆದಿದ್ದಾರೆ, ಈಗ ಅವರು ಕೂಡ ಅರ್ಜಿ ಹಾಕಿಕೊಳ್ಳಲಿಕ್ಕೆ ಇದೆಯೇ because you are extending it to these people?

ಶ್ರೀ ಬಿ. ಸೋಮಶೇಖರ್ : ಈಗ ಅವರು ಹೇಳಿದ ವಿಚಾರ ನಮಗೆ ಅರ್ಥವಾಯಿತು. ಮೊದಲು ಯಾರು ಅರ್ಜಿ ಹಾಕಿಲ್ಲ ಅಂಥವರ ಬಗ್ಗೆ ಕಾನೂನು ತಿದ್ದುಪಡಿಯನ್ನು ನಾವು ತಂದಿದ್ದೇವೆ. ಈಗ ಅವರ ಏನು ಹೇಳಿದ್ದಾರೆ ಅದರ ಬಗ್ಗೆ ಮಾಹಿತಿಯನ್ನು ತರಿಸಿಕೊಳ್ಳುತ್ತೇನೆ. ಅದರಲ್ಲಿ ನಿಜವಾಗಿಯೂ ಏನಾದರೂ ಅರ್ಥವಿದ್ದರೆ ಸರ್ಕಾರ ಸಹಾನುಭೂತಿಯಿಂದ ಪರಿಶೀಲನೆ ಮಾಡಿ ಮುಂದೆ ಏನು ಕ್ರಮ ತೆಗೆದುಕೊಳ್ಳಬೇಕು ಅದನ್ನು ತೆಗೆದುಕೊಳ್ಳೋಣ. ಈಗ ನಾವು ಏನು ಬಿಲ್ಲನ್ನು ತಂದಿದ್ದೇವೆ, ಅದನ್ನು ತಾವು ಪಾಸು ಮಾಡಿಕೊಡಿ.

ಅಧ್ಯಕ್ಷರು : ಪ್ರಕಾಶ್‌ರವರೇ, ತಾವು ಹಂಗಾಮಿ ಸಾಗುವಳಿ ಚೀಟಿ ಇರತಕ್ಕಂಥವರನ್ನು ಖಾಯಂ ಮಾಡಿಕೊಳ್ಳಲಿಕ್ಕೆ ಅವಕಾಶವಾಗುತ್ತದೆಂದು ಏನು ಹೇಳಿದ್ದಿರಿ, ಅಂಥವರಿಗೋಸ್ಕರವೇ ಇದನ್ನು ಮಾಡಿರುವುದು.

ಶ್ರೀ ಆರ್. ವೆಂಕಟಾಚಲಯ್ಯ (ದೊಡ್ಡಬಳ್ಳಾಪುರ) : ಮಾನ್ಯ ಅಧ್ಯಕ್ಷರೆ, ಅವರು ವಾಯಿದೆಯೊಳಗಾಗಿ ಅರ್ಜಿಯನ್ನು ಕೊಟ್ಟಿದ್ದಾರೆ. ರೈತರಿಗೆ ಕಛೇರಿಯಿಂದ ಸ್ವೀಕೃತಿಯನ್ನು ಕೊಟ್ಟಿದ್ದಾರೆ, ಆದರೆ ರಿಜಿಸ್ಟರ್‌ಗೆ ನೊಂದಾಯಿಸಿಕೊಂಡಿಲ್ಲ. ಅಂಥ ಕೇಸಸನ್ನು ಕ್ಲಿಯರ್ ಮಾಡಿಲ್ಲ. ಎರಡನೆಯದಾಗಿ ರೈತರು ಅರ್ಜಿಯನ್ನು ಕೊಟ್ಟಿದ್ದಾರೆ, ರಿಜಿಸ್ಟರ್‌ಗೆ ನೊಂದಾಯಿಸಿದೆ, ಆದರೆ ಸರ್ಕಾರಕ್ಕೆ ಯಾವುದೂ ಬಾಕಿ ಇಲ್ಲವೆಂದು ತಹಶೀಲ್ದಾರ್‌ರವರು ವರದಿಯನ್ನು ಕಳುಹಿಸಿದ್ದಾರೆ. ಅಂಥಹ ಅರ್ಜಿಗಳು ನಮ್ಮ ತಾಲ್ಲೂಕಿನಲ್ಲಿ ಒಂದೂವರೆ ಸಾವಿರ ಇದೆ.

ಅಧ್ಯಕ್ಷರು : ಅವರ್ಯಾರೋ ಬರೆದುಕೊಟ್ಟ ಮಾತ್ರಕ್ಕೆ ಆಗುವುದಿಲ್ಲ. ಒಂದು ಸಲ ಸ್ವೀಕೃತಿಯನ್ನು ಕೊಟ್ಟುಬಿಟ್ಟರೆ his right persists nobody can take away his right. ಯಾರೋ ಒಬ್ಬ ರವಿನ್ಯೂ ಇನ್ಸ್‌ಪೆಕ್ಟರೋ ತಹಶೀಲ್ದಾರ್‌ರೋ ಇಲ್ಲವೆಂದು ಬರೆದು ಕಳುಹಿಸಿದರೆ ಬಡವ ಯಾರು

ಜಮೀನಿನಲ್ಲಿದ್ದಾನೆ ಅವನ ಹಕ್ಕನ್ನು ಯಾರೂ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ. One Revenue Inspector cannot take away. It is a simple thing.

ಶ್ರೀ ಆರ್. ವೆಂಕಟಾಚಲಯ್ಯ : ಅಂಥಹ ಅರ್ಜಿಗಳನ್ನು ತೀರ್ಮಾನವನ್ನು ತೆಗೆದುಕೊಳ್ಳುವುದಕ್ಕೆ ಸಮಿತಿಯ ಮುಂದೆ ಇಡುತ್ತಿಲ್ಲ.

MR. SPEAKER : You must assert your position as MLA. ಬನ್ನಿ ನಾನು ಹೇಗೆ ಮಾಡುವುದು ಎಂದು ಹೇಳಿಕೊಡುತ್ತೇನೆ. ಅದರ ಬಗ್ಗೆ ಚಿಂತನೆ ಮಾಡಬೇಡಿ.

ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ) : ಸ್ಟೇಟ್ ರಿಸರ್ವ್ಡ್ ಲ್ಯಾಂಡನ್ನು ಸೇರಿಸಿಕೊಡಿ, 12-13 ಸಾವಿರ ಎಕರೆ ಒಂದೊಂದು ತಾಲ್ಲೂಕಿನಲ್ಲಿ ಸೇಂದಿಯ ವನವಿದೆ ಮತ್ತೆ ಅದನ್ನು ಕೊಡುವುದಕ್ಕಾಗುವುದಿಲ್ಲ.

ಅಧ್ಯಕ್ಷರು : ನಾನು ನಿಮಗೆ ವಿನಂತಿ ಮಾಡಿಕೊಳ್ಳುತ್ತೇನೆಂದರೆ, ಈಗ ಈ ಅಮೆಂಡ್‌ಮೆಂಟನ್ನು ಪಾಸು ಮಾಡಿಸಿಕೊಡೋಣ, ಸ್ಟೇಟ್ ರಿಸರ್ವ್ಡನ್ನು ತಾವು ಹೇಳುತ್ತಾ ಇರತಕ್ಕಂಥದ್ದು, ಶಿವಪ್ಪನವರು ಪ್ರಸ್ತಾಪ ಮಾಡಿರತಕ್ಕಂಥ ವಿಚಾರ ಇನ್ನು ಒಂದೆರಡು ವಿಚಾರಗಳನ್ನು we will advice the Minister to kindly give his immediate attention to these matters and take up remedial measures. There is no problem.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ) : ಮಾನ್ಯ ಅಧ್ಯಕ್ಷರೆ, ಈ ಫಾರಂ ನಂ:50ರಲ್ಲಿ ಅರ್ಜಿಯನ್ನು ಸಲ್ಲಿಸಿದಂತಹ ಸಂದರ್ಭದಲ್ಲಿ ಮೊದಲು ಏನಿತ್ತು ಅಂದರೆ ಗೋಮಾಳ, ಪ್ಲಾಂಟೇಷನನ್ನು ಕುಮ್ಕಿಯನ್ನು ಬಿಟ್ಟು ಅರ್ಜಿಯನ್ನು ಕೊಡಬೇಕೆಂಬ ವಿಚಾರ ಇತ್ತು. ಆ ಸಂದರ್ಭದಲ್ಲಿ ಗೋಮಾಳ, ಕುಮ್ಕಿ, ಪ್ಲಾಂಟೇಷನನ್ನು ಬಿಟ್ಟು ಅರ್ಜಿಯನ್ನು ಹಾಕಿದ್ದಾರೆ. ಈಗ ಗೋಮಾಳದಲ್ಲಿ ಇರತಕ್ಕಂಥವರಿಗೆ ಕೊಡಬಹುದು ಎನ್ನತಕ್ಕಂಥ ಕಾಯಿದೆಯನ್ನು ತಾವು ತಂದಿದ್ದೀರಿ. ಈಗ ಗೋಮಾಳದವರು ಪುನಃ ಅರ್ಜಿಯನ್ನು ಸಲ್ಲಿಸಬೇಕಾಗುತ್ತದೆ. ಅವರು ಆ ಸಮಯದಲ್ಲಿ ಅರ್ಜಿಯನ್ನು ಕೊಡದೇ ಇರುವುದರಿಂದ, ಅವರಿಗೆ ಅರ್ಜಿಯನ್ನು ಸಲ್ಲಿಸಲು ಅವಕಾಶ ಇಲ್ಲದೇ ಇರುವುದರಿಂದ, ಕುಮ್ಕಿಯವರಿಗೂ ಸಹ ಅವಕಾಶ ಇಲ್ಲದೆ ಇರುವುದರಿಂದ ಇಲ್ಲಿಯವರೆಗೆ ಹೆಚ್ಚಿಗೆ ಅವರಿಗೆ ಕೊಟಿಲ್ಲ. ಅವರಲ್ಲಿ ಕೆಲವರಿಗೆ ಕೊಟ್ಟಿದ್ದಾರೆ, ಅದು ರಿಜೆಕ್ಟ್ ಆಗಿದೆ, ಇನ್ನು ಕೆಲವು ಹಾಗೆಯೇ ಇದೆ. ಆದ್ದರಿಂದ ಗೋಮಾಳ ಮತ್ತು ಕುಮ್ಕಿಯವರಿಗೆ ತಾವು ಯಾವ ರೀತಿಯಲ್ಲಿ ಅವಕಾಶವನ್ನು ಕಲ್ಪಿಸುತ್ತೀರಿ.

ಅಧ್ಯಕ್ಷರು : ಎಲ್ಲರಿಗೂ ಒಂದೇ ರೀತಿಯಲ್ಲಿ ಡೆಪ್ಯೂಟಿ ಕಮೀಷನರ್‌ಗೆ ಅರ್ಜಿಯನ್ನು ಹಾಕಿಕೊಳ್ಳುವುದು.

ಶ್ರೀ ಬಿ. ಸೋಮಶೇಖರ್ : ಈ ಪ್ರಿವಿಲೇಜ್ಡ್ ಲ್ಯಾಂಡ್ಸ್ ಅಂಥಹ ಕುಮ್ಕಿ, ಖಾಣ, ಬಾಣ, ಸೂಪ್ಪಿನಬೆಟ್ಟ ಇವೆಲ್ಲವನ್ನೂ ನಾವು ಹೊಸದಾಗಿ ಏನು ಇಂಟ್ರಡ್ಯೂಸ್ ಮಾಡುತ್ತಾ ಇದ್ದೇವೆ, ಇದನ್ನು ಯಾವರೀತಿ ರೆಗ್ಯುಲರೈಸ್ ಮಾಡಬೇಕೆಂಬುದರ ಬಗ್ಗೆ ರೂಲ್ಸನ್ನು ತರುತ್ತಾ

ಇದ್ದೇವೆ. ನಾವು 94 (ಬಿ) ಅಮೆಂಡ್‌ಮೆಂಟನ್ನು ತರುತ್ತಾ ಇರತಕ್ಕಂಥದ್ದು ಈ ಒಂದು ವಿಶೇಷವಾದ ಮೀನುಗಳನ್ನು ಸಹಾಯ ಮಾಡುವುದಕ್ಕೆ ರೂಲ್ಸ್‌ನಲ್ಲಿ ಏನು ಮಾಡಬೇಕೆಂಬ ಬಗ್ಗೆ ಅನಂತರ ತರುತ್ತೇವೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೆ, ಈಗ ತಂದಿರತಕ್ಕಂಥ ತಿದ್ದುಪಡಿ ಸರಿಯಾಗಿದೆ. ಅದರಲ್ಲಿ ಒಂದು ಕ್ಲಾರಿಫೈ ಮಾಡಬೇಕೆಂದರೆ ಲಾಸ್ಟ್ ಡೇಟ್ ಆದ ಮೇಲೆ ಅರ್ಜಿಯನ್ನು ಕೊಟ್ಟಿರುವ ಕಾರಣಕ್ಕೋಸ್ಕರ ವಜಾ ಆದ ಅರ್ಜಿಯನ್ನು ಸೇರಿಸಿಕೊಳ್ಳಬೇಕು ಎಂಬುದು ಒಂದು. ಲಾಸ್ಟ್ ಡೇಟ್ ಆದ ಮೇಲೆ ಅರ್ಜಿಯನ್ನು ಕೊಟ್ಟಿದ್ದೀರಿ ಎಂದು ತಾಲ್ಲೂಕು ಕಛೇರಿಯಲ್ಲಿ ಉಳಿದುಬಿಟ್ಟಿದೆ. ಅದನ್ನು ರಿಜಿಸ್ಟರ್‌ನಲ್ಲಿ ನೊಂದಾಯಿಸಿಲ್ಲ, ಡಿಸಿಯವರಿಗೂ ಕಳುಹಿಸಿಲ್ಲ. ಏಕೆಂದರೆ ರಿಜಿಸ್ಟರ್‌ನಲ್ಲಿ ಎಂಟ್ರಿ ಮಾಡಿದರೆ ಡಿಸಿಯವರೂ ಸಹಿ ಮಾಡುತ್ತಾರೆ. ಆ ಸಹಿ ಮಾಡಿದ ಮೇಲೆ ಅರ್ಜಿಯನ್ನು ಕೊಟ್ಟರೆ, ಆ ಅರ್ಜಿಯನ್ನು ಪರಿಗಣನೆಗೆ ತೆಗೆದುಕೊಳ್ಳುವುದಿಲ್ಲವೆಂದು ಹೇಳಿ ತಾಲ್ಲೂಕು ಕಛೇರಿಯಲ್ಲಿ ಅದನ್ನು ಪೆಂಡಿಂಗ್ ಇಟ್ಟಿದ್ದಾರೆ. ಎರಡನೆಯದಾಗಿ ಕೆಲವರು ಹೊಂಗೇ ಮರ, ನೀಲಗಿರಿ ಮರ, ಬೇರೆ ಬೇರೆ ಮರಗಳನ್ನು ಬೆಳೆಸಿಕೊಂಡಿದ್ದಾರೆ ಎನ್ನುವ ಕಾರಣಕ್ಕೋಸ್ಕರ ಅದನ್ನು ರಿಜೆಕ್ಟ್ ಮಾಡಿದ್ದಾರೆ. ಮಾವು, ಹೊಂಗೆ, ನೀಲಗಿರಿ ಇಂಥದನ್ನೆಲ್ಲಾ ಬೆಳೆದಿದ್ದಾರೆ ಎನ್ನುವ ಕಾರಣಕ್ಕೋಸ್ಕರ ರಿಜೆಕ್ಟ್ ಮಾಡಿದ್ದಾರೆ. ಅವುಗಳನ್ನು ಇದರೊಳಗೆ ತರಬೇಕು ಇಲ್ಲದಿದ್ದರೆ ಅನ್ಯಾಯವಾಗುತ್ತದೆ. ಎಂದು ನಾನು ಹೇಳುತ್ತಿದ್ದೇನೆ.

ಅಧ್ಯಕ್ಷರು : ಅದೆಲ್ಲಾ ಸುಲಭವಾಗಿ ನಡೆದುಕೊಂಡು ಹೋಗುತ್ತದೆ. ಇನ್ನೂ ಕೆಲವು ಕಡೆ ಸ್ಮಶಾನ ಎಂದು ತೋರಿಸಿದ್ದಾರೆ. ಅಲ್ಲಿ ಸ್ಮಶಾನಾನೂ ಇಲ್ಲ, ಅಲ್ಲಿ ಸುಮಾರು ವರ್ಷದಿಂದ ಸಾಗುವಳಿ ಮಾಡುತ್ತಿರುತ್ತಾರೆ. ಆ ಟೈಟಲನ್ನು ಚೇಂಜ್ ಮಾಡುವುದಕ್ಕೆ ಯಾರಿಗೂ ಅಧಿಕಾರವಿಲ್ಲ. It has to come to the Cabinet according to the Government Rules. ಅವೆಲ್ಲವನ್ನೂ ಮಾಡಿಕೊಳ್ಳಬಹುದು. ಅದು ಅಡ್ಮಿನಿಸ್ಟ್ರೇಷನ್ ಮ್ಯಾಟರ್.

ಶ್ರೀ ಬಿ.ಬಿ. ಶಿವಪ್ಪ : ಅಧ್ಯಕ್ಷರೆ, ಇದರಲ್ಲಿ ಯಾಕೋ ನನಗೆ ಸ್ವಲ್ಪ ಕನ್‌ಫ್ಯೂಸ್ ಆಗುತ್ತಿದೆ. ತುಂಬಾ ಅರ್ಜಿಯನ್ನು ನಾವು ವಜಾ ಮಾಡಿದ್ದಾರೆ. ಅವನು 4 ಎಕರೆಯನ್ನು ಒತ್ತುವರಿ ಮಾಡಿದ್ದರೆ, ಅವನು ಒಂದು ಎಕರೆ ಕಾಫಿಯನ್ನು ಹಾಕಿದ್ದಾನೆಂದರೆ, ಅವನಿಗೆ ಒಂದು ಎಕರೆಯನ್ನು ಕಳೆದು 3 ಎಕರೆಯನ್ನು ಮಂಜೂರು ಮಾಡಿರುವುದು. ಅವನ ಒಂದು ಎಕರೆ ಹಿಡುವಳಿಯಲ್ಲಿದೆ. ನನ್ನ ಕ್ಷೇತ್ರದಲ್ಲಿ ನಾನು ಕೆಲವು ಭಾಗಕ್ಕೆ ಶಾಸಕನಾಗಿ, ಅಧ್ಯಕ್ಷನಾಗಿದ್ದೇನೆ. ಉಪವಿಭಾಗಾಧಿಕಾರಿಗಳು ಕೆಲವು ಭಾಗಕ್ಕೆ ಅಧ್ಯಕ್ಷರಾಗಿದ್ದಾರೆ. ಅವರು ಇದೇ ಕೆಲಸವನ್ನು ಮಾಡಿದ್ದಾರೆ. ಕಾಫಿ ಹಾಕಿದ್ದ ಜಾಗವನ್ನು ವಜಾ ಮಾಡಿದ್ದಾರೆ. ಪ್ಲಾಂಟೇಷನ್ ಎಂದು ಹೇಳಿ ವಜಾ ಮಾಡಿದ್ದಾರೆ. ಇದರ ಬಗ್ಗೆ ನಾನು ಜಿಲ್ಲಾಧಿಕಾರಿಯವರಿಗೆ ಪತ್ರ ಬರೆದಿದ್ದೇನೆ. ಈ ರೀತಿಯಾಗುವುದರಿಂದ ನಮಗೆ ಜಾಗ ಸಿಗುವುದಿಲ್ಲ. ಸರ್ಕಾರಕ್ಕೆ ಬರುವ ಹಣ ನಿಂತುಹೋಗುತ್ತದೆ. ಅವನು ಜಾಗವನ್ನು ಬಿಡುವುದಿಲ್ಲ. ಅವನು ಎಷ್ಟೋ ವರ್ಷಗಳಿಂದ ಅದನ್ನು ಅನುಭವಿಸಿಕೊಂಡು ಹೋಗುತ್ತಿರುತ್ತಾನೆ. ಈ ಕಾಫಿನ

ಕಂಡೀಷನ್ ಏಕೆ ಹಾಕುತ್ತೀರಿ. ಇದನ್ನು ಬಿಟ್ಟು ಕೊಡಿ ಎಂದು ಜಿಲ್ಲಾಧಿಕಾರಿಯವರಿಗೆ ಪತ್ರ ಬರೆದಾಗ ಅವರು ಕೂಡ ಹೇಳಿದ್ದಾರೆ, ಈ ಜಾಗವನ್ನು ಬಿಡುವುದಕ್ಕೆ ಆಗುವುದಿಲ್ಲ. ಅವರು ಕಾಫಿಯನ್ನು ಬೆಳೆದರೆ ಮಂಜೂರು ಮಾಡುವುದಕ್ಕಾಗುವುದಿಲ್ಲ ಎಂದು ಜಿಲ್ಲಾಧಿಕಾರಿಯವರು ಹೇಳಿದ್ದಾರೆ.

ಅಧ್ಯಕ್ಷರು : ಸರ್ಕಾರದವರು ತಮ್ಮ ನಿರ್ಣಯವನ್ನು ಬದಲಾಯಿಸಿಕೊಂಡಿದ್ದಾರಲ್ಲಾ

ಶ್ರೀ ಬಿ.ಬಿ. ಶಿವಪ್ಪ : ಅದನ್ನು ಬದಲಾಯಿಸಿಕೊಟ್ಟರೆ ಅದರಲ್ಲಿ ಬಹಳ ಜನ ಬರುತ್ತಾರೆ. ಇಲ್ಲದಿದ್ದರೆ ತಾವು ಹೇಳಿದ ಹಾಗೆ ಬಡವರಿಗೆ ಭೂಮಿ ಸಿಗುವುದಿಲ್ಲ;

ಶ್ರೀ ಎಂ. ಬಸಪ್ಪ : ಸೇಂದಿಯನ್ನು 40 ವರ್ಷದಿಂದ 30 ವರ್ಷಕ್ಕೆ .....

ಅಧ್ಯಕ್ಷರು : ಬಸಪ್ಪನವರೇ, ಸೇಂದಿಯ ಬಗ್ಗೆ ಚರ್ಚೆಯಾಯಿತು. ನಾನು ಮಂತ್ರಿಗಳಿಗೆ ನಿಮ್ಮೆಲ್ಲರ ಪರವಾಗಿ ಹೇಳಿದ್ದೇನೆ. ಈಚಲ ಮರಗಳು ಇರತಕ್ಕದ್ದು ತಾನೇ ಸೇಂದಿ ವನ ಇರತಕ್ಕಂಥದ್ದು ಅವುಗಳನ್ನೂ ಕೂಡ ತಾವು ಪರಿಗಣನೆಗೆ ಮಾಡಬೇಕೆಂದು ಮಾಧುಸ್ವಾಮಿಯವರು ಪ್ರಸ್ತಾಪ ಮಾಡಿದರು. ಅದರ ಬಗ್ಗೆ ಈಗಾಗಲೇ ಹೇಳಿದ್ದೇನೆ.

ಖಂಡ-2ಕ್ಕೆ ತಿದ್ದುಪಡಿ.

ಶ್ರೀ ಬಿ. ಸೋಮಶೇಖರ್ (ಕಂದಾಯ ಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ಖಂಡ 2ರ ಮೂಲಕ ಸೇರಿಸಲು ಕೋರಿರುವ ಸೆಕ್ಷನ್ 94(ಬಿ)ರಲ್ಲಿ ಪ್ರಕರಣದಲ್ಲಿ ನಾನು ಈ ಕೆಳಕಂಡ ತಿದ್ದುಪಡಿಯನ್ನು ಮಂಡಿಸುತ್ತೇನೆ.

(1) (i) ನೇ ಉಪಪ್ರಕರಣದಲ್ಲಿ-

(i) " ಅವರು ನಿಯಮಿಸಬಹುದಾದಂಥ ನಿಯಮಗಳು ಮತ್ತು ಅಂಥ ನಿರ್ಬಂಧಗಳು ಮತ್ತು ಷರತ್ತುಗಳಿಗೆ ಒಳಪಟ್ಟ ಮತ್ತು ಅಂಥ ವಿಧಾನದಲ್ಲಿ ಅಂಥಹ ವ್ಯಕ್ತಿಗೆ ಭೂಮಿಯನ್ನು ಮಂಜೂರು ಮಾಡಬಹುದು ಪದಗಳಿಗೆ" ಆತನು ಕರ್ನಾಟಕ ಭೂಕಂದಾಯ (ತಿದ್ದುಪಡಿ) ಅಧಿನಿಯಮ, 1997ರ ಪ್ರಾರಂಭದ ದಿನಾಂಕದಿಂದ ಒಂದು ವರ್ಷದೊಳಗೆ ಮತ್ತು ನಿಯಮಿಸಬಹುದಾದಂಥ ನಿಯಮಗಳಿಗೆ ಒಳಪಟ್ಟು 94 ಎ ಪ್ರಕರಣದ ಅಡಿ ರಚಿತವಾದ ಸಂದರ್ಭಾನುಸಾರವಾಗಿ ಸಮಿತಿಗೆ ಅಥವಾ ಹೆಚ್ಚುವರಿ ಸಮಿತಿಗೆ ಶಿಫಾರಸ್ಸುಗಳನ್ನು ಮಾಡಬಹುದು ಮತ್ತು ಅಂಥ ಸಮಿತಿಯು ಶಿಫಾರಸ್ಸುಗಳನ್ನು ಪಡೆದ ತರುವಾಯ ಅಂಥ ವ್ಯಕ್ತಿಗೆ ಭೂಮಿಯನ್ನು ಮಂಜೂರು ಮಾಡಬಹುದು; "ಎಂಬ ಪದಗಳನ್ನು ಅಂಕಿಗಳನ್ನು, ಅಕ್ಷರಗಳನ್ನು ಮತ್ತು ಆವರಣಗಳನ್ನು ಪ್ರತಿಯೋಜಿಸತಕ್ಕದ್ದು"

(ii) ಮೊದಲನೇ ಪರಂತುಕಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:

"ಪರಂತು ಇತರ ಯಾವೊಬ್ಬ ವ್ಯಕ್ತಿಯು ಅದೇ ಭೂಮಿಯ ಮಂಜೂರಾತಿಗೆ 94 ಎ ಪ್ರಕರಣದ ಅಡಿಯಲ್ಲಿ ಸಲ್ಲಿಸಲಾಗಿದ್ದ ಅರ್ಜಿಯು ಆ ಪ್ರಕರಣದ ಅಡಿಯಲ್ಲಿ

ಪರಿಶೀಲನೆಗಾಗಿ ಬಾಕಿ ಉಳಿದಿದ್ದರೆ. ಸಂದರ್ಭಾನುಸಾರವಾಗಿ ಸಮಿತಿ ಅಥವಾ ಹೆಚ್ಚುವರಿ ಸಮಿತಿಯು ಈ ಉಪ ಪ್ರಕರಣದ ಅಡಿಯಲ್ಲಿ ಭೂಮಿಯನ್ನು ಮಂಜೂರು ಮಾಡುವುದಕ್ಕೆ ಮೊದಲು ಇತರ ಅಂಥ ವ್ಯಕ್ತಿಯ ಕ್ಲೇಮನ್ನು ಪರಿಗಣಿಸತಕ್ಕದ್ದು".

(2) ನೇ ಉಪಕರಣಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು ಎಂದರೆ:

"(2) 94 (ಎ) ಪ್ರಕರಣದ (4)ನೇ ಉಪಪ್ರಕರಣದ ಕೋಷ್ಟಕ ಮತ್ತು ವಿವರಣೆಯೂ ಸೇರಿದಂತೆ ಅದರ ಮೊದಲನೇ ಪರಂತುಕದ ಎರಡನೇ ಪರಂತುಕದ ಮತ್ತು (5)ಮತ್ತು (6)ನೇ ಉಪಪ್ರಕರಣಗಳ ಉಪಬಂಧಗಳು (1)ನೇ ಉಪ ಪ್ರಕರಣದ ಅಡಿಯಲ್ಲಿ ಮಾಡಿದ ಭೂಮಿಯ ಮಂಜೂರಾತಿಯ ಸಂಬಂಧದಲ್ಲಿ, ಯಥೋಚಿತ ವ್ಯತ್ಯಾಸಗಳೊಂದಿಗೆ, ಅನ್ವಯಿಸತಕ್ಕದ್ದು"

ಪ್ರಸ್ತಾಪ ಮಂಡಿಸಲ್ಪಟ್ಟಿತು.

ಈಗ ತಿದ್ದುಪಡಿಯನ್ನು ಸಭೆಯ ಮತಕ್ಕೆ ಹಾಕುತ್ತೇನೆ.

ಅಧ್ಯಕ್ಷರು : ಪ್ರಸ್ತಾಪ ಏನೆಂದರೆ. (1) (1) ನೇ ಉಪ ಪ್ರಕರಣದಲ್ಲಿ-

(1) "ಅವರು ನಿಯಮಿಸಬಹುದಾದಂಥ ನಿಯಮಗಳು ಮತ್ತು ಅಂಥ ನಿರ್ಬಂಧಗಳು ಮತ್ತು ಷರತ್ತುಗಳಿಗೆ ಒಳಪಟ್ಟ ಮತ್ತು ಅಂಥ ವಿಧಾನದಲ್ಲಿ ಅಂಥವ್ಯಕ್ತಿಗೆ ಭೂಮಿಯನ್ನು ಮಂಜೂರು ಮಾಡಬಹುದು ಪದಗಳಿಗೆ" ಆತನು ಕರ್ನಾಟಕ ಭೂಕಂದಾಯ (ತಿದ್ದುಪಡಿ) ಅಧಿನಿಯಮ 1997ರ ಪ್ರಾರಂಭದ ದಿನಾಂಕದಿಂದ ಒಂದು ವರ್ಷದೊಳಗೆ ಮತ್ತು ನಿಯಮಿಸಬಹುದಾದಂಥ ನಿಯಮಗಳಿಗೆ ಒಳಪಟ್ಟು 94ಎ ಪ್ರಕರಣದ ಅಡಿ ರಚಿತವಾದ ಸಂದರ್ಭಾನುಸಾರವಾಗಿ ಸಮಿತಿಗೆ ಅಥವಾ ಹೆಚ್ಚುವರಿ ಸಮಿತಿಗೆ ಶಿಫಾರಸ್ಸುಗಳನ್ನು ಮಾಡಬಹುದು ಮತ್ತು ಅಂಥ ಸಮಿತಿಯು ಶಿಫಾರಸ್ಸನ್ನು ಪಡೆದ ತರುವಾಯ ಅಂಥ ವ್ಯಕ್ತಿಗೆ ಭೂಮಿಯನ್ನು ಮಂಜೂರು ಮಾಡಬಹುದು; "ಎಂಬ ಪದಗಳನ್ನು ಅಂಕಿಗಳನ್ನು ಅಕ್ಷರವನ್ನು ಮತ್ತು ಆವರಣಗಳನ್ನು ಪ್ರತಿಯೋಜಿಸತಕ್ಕದ್ದು"

(11) ಮೊದಲನೇ ಪರಂತುಕಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:

"ಪರಂತು ಇತರ ಯಾವೊಬ್ಬ ವ್ಯಕ್ತಿಯು ಅದೇ ಭೂಮಿಯ ಮಂಜೂರಾತಿಗೆ 94ಎ ಪ್ರಕರಣದ ಅಡಿಯಲ್ಲಿ ಸಲ್ಲಿಸಲಾಗಿದ್ದ ಅರ್ಜಿಯು ಆ ಪ್ರಕರಣದ ಅಡಿಯಲ್ಲಿ ಪರಿಶೀಲನೆಗಾಗಿ ಬಾಕಿ ಉಳಿದಿದ್ದರೆ ಸಂದರ್ಭಾನುಸಾರವಾಗಿ ಸಮಿತಿ ಅಥವಾ ಹೆಚ್ಚುವರಿ ಸಮಿತಿಯು ಈ ಉಪಪ್ರಕರಣದ ಅಡಿಯಲ್ಲಿ ಭೂಮಿಯನ್ನು ಮಂಜೂರು ಮಾಡುವುದಕ್ಕೆ ಮೊದಲು ಇತರ ಅಂಥ ವ್ಯಕ್ತಿಯ ಕ್ಲೇಮನ್ನು ಪರಿಗಣಿಸತಕ್ಕದ್ದು".

(2) (2)ನೇ ಉಪಪ್ರಕರಣಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:

" (2) 94 ಎ ಪ್ರಕರಣದ (4)ನೇ ಉಪಕರಣದ ಕೋಷ್ಟಕ ಮತ್ತು ವಿವರಣೆಯೂ ಸೇರಿದಂತೆ ಅದರ ಮೊದಲನೇ ಪರಂತುಕದ, ಎರಡನೇ ಪರಂತುಕದ ಮತ್ತು (5) ಮತ್ತು (6) ನೇ ಉಪಪ್ರಕರಣಗಳ ಉಪಬಂಧಗಳು (1) ನೇ ಉಪಪ್ರಕರಣದ ಅಡಿಯಲ್ಲಿ ಮಾಡಿದ ಭೂಮಿಯ ಮಂಜೂರಾತಿಯ ಸಂದರ್ಭದಲ್ಲಿ ಯಥೋಚಿತ ವ್ಯತ್ಯಾಸಗಳೊಂದಿಗೆ ಅನ್ವಯಿಸತಕ್ಕದ್ದು".

ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು

ಖಂಡ -2 ತಿದ್ದುಪಡಿಯಾದಂತೆ :

ಅಧ್ಯಕ್ಷರು : ಪ್ರಸ್ತಾಪ ಏನೆಂದರೆ, ತಿದ್ದುಪಡಿಯಾದ ಎರಡನೆಯ ಖಂಡವು ಈ ವಿಧೇಯಕದ ಅಂಗವಾಗಿರುತ್ತದೆ.

ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು

(ತಿದ್ದುಪಡಿಯಾದ ಎರಡನೆಯ ಖಂಡವನ್ನು ವಿದೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 1 ಇತ್ಯಾದಿ :

ಅಧ್ಯಕ್ಷರು : "ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ."

ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗು ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಬಿ. ಸೋಮಶೇಖರ್ (ಕಂದಾಯ ಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, 1997ನೇ ಸಾಲಿನ ಕರ್ನಾಟಕ ಭೂಕಂದಾಯ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿಗಳೊಂದಿಗೆ ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾಪ ಏನೆಂದರೆ,

"1997ನೇ ಸಾಲಿನ ಕರ್ನಾಟಕ ಭೂಕಂದಾಯ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿಗಳೊಂದಿಗೆ ಅಂಗೀಕರಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ವಿಧೇಯಕ, 1997

ಶ್ರೀ ಎಸ್.ಎಸ್. ಪಾಟೀಲ್ (ಸಹಕಾರ ಮಂತ್ರಿಗಳು) : ಸನ್ಮಾನ್ಯ ಅಧ್ಯಕ್ಷರೆ, 1997ನೇ ಸಾಲಿನ ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲ್ಪಟ್ಟಿತು

ಕರ್ನಾಟಕ ಸಹಕಾರ ಸಂಘಗಳ (ಎರಡನೇ ತಿದ್ದುಪಡಿ) ವಿಧೇಯಕ, 1997

ಶ್ರೀ ಎಸ್.ಎಸ್. ಪಾಟೀಲ್ (ಸಹಕಾರ ಸಚಿವರು) : ಸನ್ಮಾನ್ಯ ಅಧ್ಯಕ್ಷರೆ, 1997ನೇ ಸಾಲಿನ ಕರ್ನಾಟಕ ಸಹಕಾರ ಸಂಘಗಳ (ಎರಡನೆಯ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲ್ಪಟ್ಟಿತು.

ಕರ್ನಾಟಕ ಸೌಹಾರ್ದ ಸಹಕಾರಿ ವಿಧೇಯಕ, 1977

ಶ್ರೀ ಎಸ್.ಎಸ್. ಪಾಟೀಲ್ (ಸಹಕಾರ ಸಚಿವರು) : ಸನ್ಮಾನ್ಯ ಅಧ್ಯಕ್ಷರೆ, 1997ನೇ ಸಾಲಿನ ಕರ್ನಾಟಕ ಸೌಹಾರ್ದ ಸಹಕಾರಿ ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲ್ಪಟ್ಟಿತು.

ಶ್ರೀ ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ಇದೂ ಕೂಡ ಸಮಾಜದಲ್ಲಿ ಬಹಳಷ್ಟು ಪರಿಣಾಮವಾಗತಕ್ಕ ಮತ್ತು ಪರಿವರ್ತನೆ ತರತಕ್ಕ ಕಾನೂನು ಇದ್ದ ಕಾರಣ ನನ್ನ ಮನವಿ ಏನೆಂದರೆ ಇದನ್ನು ಜಂಟಿ ಸಲಹಾ ಸಮಿತಿಗೆ ರೆಫರ್ ಮಾಡಿದರೆ ಒಳ್ಳೆಯದು; ಇದು ಅಲ್ಲಿ ಚರ್ಚೆಯಾಗಿ ನಂತರ ಇಲ್ಲಿ ಬಂದು ಪಾಸ್ ಆದರೆ ಉತ್ತಮವೆಂದು ನನ್ನ ವೈಯಕ್ತಿಕ ಅಭಿಪ್ರಾಯ, ಇಲ್ಲ, ಇಲ್ಲೇ ಚರ್ಚೆ ಮಾಡಿ ಪಾಸ್ ಮಾಡುತ್ತೇವೆಂದರೆ ಅದು ನಿಮಗೆ ಬಿಟ್ಟಿದ್ದು. ಬೇಕಾದರೆ ಅದರ ಬಗ್ಗೆ ನಾಳೆ ಪ್ರಸ್ತಾಪ ಮಾಡೋಣ.

ಶ್ರೀ ಆರಗ ಜ್ಞಾನೇಂದ್ರ : ಇದರ ಬಗ್ಗೆ ಸ್ವಲ್ಪ ಚರ್ಚೆ ಮಾಡಬೇಕಾಗಿರುವುದರಿಂದ ದಯಮಾಡಿ ನಾಳೆ ಚರ್ಚೆಗೆ ಅವಕಾಶ ಮಾಡಿಕೊಡಿ.

ಅಧ್ಯಕ್ಷರು : ಸಹಕಾರ ಇಲಾಖೆಯ ಮಂತ್ರಿಗಳು ಮಂಡಿಸಿರತಕ್ಕ ವಿಧೇಯಕವನ್ನು ನಾಳೆ ಚರ್ಚೆಗೆ ತೆಗೆದುಕೊಳ್ಳೋಣ. ಈಗ ಕೃಷಿ ಮಾರುಕಟ್ಟೆ ರಾಜ್ಯ ಮಂತ್ರಿಗಳದ್ದು ಒಂದು ವಿಧೇಯಕ